







ಎರಡು ಕೆರೆಗಳ ಆಸುಪಾಸು ಹಸಿರು ಕಾಡು ಆವರಿಸಿಕೊಂಡಿದೆ. ಗುಡವಿ ಕೆರೆ ಸುತ್ತುವರಿದ ಮರಗಳು ನೀರಿನಲ್ಲಿ ಅರ್ಧಂಬರ್ಧ ಮುಳುಗಿರುವುದರಿಂದ ಹಕ್ಕಿಗಳಿಗೆ ಆಹಾರದ ಜೊತೆಗೆ ಸುರಕ್ಷೆಯ ವ್ಯವಸ್ಥೆಯಾದಂತೆಯೇ. ಇಲ್ಲಿಗೆ ವಲಸೆ ಹಕ್ಕಿಗಳು ಮರಿ ಹಾಕಿ ಎತ್ತರದ ಮರಗಳ ಮೇಲೆ ಗೂಡು ಕಟ್ಟಿ ವಂಶಾಭಿವೃದ್ಧಿಯಲ್ಲಿ ತೊಡಗುವುದಕ್ಕೆ ಅನುಕೂಲವಿದೆ. ಅಕ್ಟೋಬರ್– ನವೆಂಬರ್ ತಿಂಗಳಲ್ಲಿ ವಲಸೆ ಬಂದ ಪಕ್ಷಿಗಳು ಬೆಳೆದ ತಮ್ಮ ಮರಿಗಳೊಡನೆ ಜಾಗ ಖಾಲಿ ಮಾಡಿದರೆ ಸ್ಥಳೀಯ ಹಕ್ಕಿಗಳು ತಮ್ಮ ಸಂಸಾರವನ್ನು ಇಲ್ಲಿಯೇ ಮುಂದುವರೆಸುತ್ತವೆ.

ಬಾನಾಡಿಗಳು ಸ್ವಚ್ಛಂದವಾಗಿ ತಮ್ಮ ಬಿಡಾರವನ್ನು ಸಾಗಿಸುವ ಅಪೂರ್ವ ನೋಟದ ಆನಂದವನ್ನು ಸವಿಯಲು ಪಕ್ಷಿ ತಜ್ಞರೇ ಆಗಬೇಕೆಂದಿಲ್ಲ. ಸಾರ್ವಜನಿಕರಿಗೆ, ಛಾಯಾಗ್ರಾಹಕರಿಗೆ ಹತ್ತಿರದಿಂದ ದೃಶ್ಯಗಳನ್ನು ನೋಡಲು , ಸೆರೆಹಿಡಿಯಲು ಅನುಕೂಲವಾಗುವಂತೆ ಎತ್ತರದ ಗೋಪುರಗಳನ್ನು  ಮತ್ತು ಕಿರುಸೇತುವೆಗಳನ್ನು ನಿರ್ಮಿಸಲಾಗಿದೆ. ಪುಟ್ಟಮಕ್ಕಳಿಗಾಗಿಯೇ ಒಂದು ಪುಟ್ಟ ಪಾರ್ಕ್, ಅಲ್ಲಲ್ಲಿ ಕುಡಿಯುವ ನೀರಿನ ವ್ಯವಸ್ಥೆ– ಹೀಗೆ ಉತ್ತಮ ಸೌಲಭ್ಯಗಳನ್ನು ಒದಗಿಸಿ ನಿರ್ವಹಿಸುತ್ತಿರುವ ಅರಣ್ಯ ಇಲಾಖೆಯ ಕಾರ್ಯ ಶ್ಲಾಘನೀಯ.

ಗುಡವಿಯ ಸುತ್ತು ಮುಗಿಸಿ ವಾಪಸ್ಸು ಮನೆಗೆ ಹೋಗುವಾಗ ನಮ್ಮಮ್ಮ ಎಂದಿನ ಧಾರಾವಾಹಿಗಳ ಬಗೆಗಿನ ಚರ್ಚೆ ಬಿಟ್ಟು ಹಕ್ಕಿಗಳ ಸಂಸಾರದ ಬಗ್ಗೆ ಮಾತನಾಡುವುದನ್ನು ಕೇಳಿದಾಗ ನಮ್ಮ ತಿರುಗಾಟ ಸಾರ್ಥಕವೆನಿಸಿತು.